# ನಗರಸಭಾ ಕಾರ್ಯಾಲಯ, ಮಂಡ್ಯ.

ಸಂಖ್ಯೆ:ನಸಮಂ/ಕಾವಿ/ಎಸ್ಎಫ್ಸಿ/ವಿದ್ಯುತ್/ಸಿಆರ್/72/2008–09. ದಿನಾಂಕ: 21–2–2009.

## ಅಲ್ಪಾವಧಿ ಟೆಂಡರ್ ಪ್ರಕಟಣೆ

ಈ ಮೂಲಕ ಲೋಕೋಪಯೋಗಿ ಇಲಾಖೆ ಹಾಗೂ ಎಲೆಕ್ಟ್ರಿಕಲ್ ಇನ್ಸ್ಪೆಕ್ಟೊರೇಟ್‌ನಲ್ಲಿ ಮತ್ತು ನಗರಸಭೆಯಲ್ಲಿ ನೊಂದಾಯಿಸಿರುವ 1ನೇ ದರ್ಜೆ ಎಲೆಕ್ಟ್ರಿಕಲ್ ಗುತ್ತಿಗೆದಾರರುಗಳಿಗೆ ತಿಳಿಯಪಡಿಸುವುದೇನೆಂದರೆ, ಮಂಡ್ಯ ನಗರ ವ್ಯಾಪ್ತಿಯಲ್ಲಿ ಈ ಕೆಳಕಂಡ ಸ್ಥಳಗಳಲ್ಲಿ ಹೈಮಾಸ್ಟ್ ದೀಪಗಳನ್ನು ಸರಬರಾಜು ಮಾಡಿ ಅಳವಡಿಸಿ ಎರಡು ವರ್ಷಗಳು ನಿರ್ವಹಣೆ ಮಾಡಲು ಟೆಂಡರ್ ಕರೆಯಲಾಗಿದೆ. KW-I ಟೆಂಡರ್ ಡಾಕ್ಯುಮೆಂಟ್‌ನಲ್ಲಿ ನಮೂದಿಸಿರುವ ಎಲ್ಲಾ ನಿಬಂಧನೆಗಳಿಗೊಳಪಟ್ಟು ಮತ್ತು ನಗರಸಭೆ ವಿಧಿಸುವ ಎಲ್ಲಾ ಷರತ್ತುಗಳಿಗೊಳಪಟ್ಟು ಟೆಂಡರ್‌ಗಳನ್ನು ಸಲ್ಲಿಸತಕ್ಕದ್ದು. ಇಷ್ಟವುಳ್ಳವರು ತಮ್ಮ ಕಡಿಮೆ ದರ ನಮೂದಿಸಿರುವ ಟೆಂಡರ್‌ಗಳನ್ನು ಸೀಲ್ ಮಾಡಿ ಕವರ್‌ಗಳ ಮೇಲೆ ಕಾಮಗಾರಿಯ ಹೆಸರು,ತಮ್ಮ ವಿಳಾಸ ಮತ್ತು ಟೆಲಿಫೋನ್ ನಂಬರ್ ಸಹಿತ ಪೌರಾಯುಕ್ತರು, ನಗರಸಭೆ, ಮಂಡ್ಯರವರ ವಿಳಾಸಕ್ಕೆ ಸಲ್ಲಿಸತಕ್ಕದ್ದು.

1) ಟೆಂಡರ್ ಫಾರಂ ಕೋರಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 9–3–2009.
2) ಖಾಲಿ ಟೆಂಡರ್ ಫಾರಂ ವಿತರಿಸಲು ಕೊನೆಯ ದಿನಾಂಕ: 9–3–2009
3) ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 11–3–2009ರಂದು ಸಂಜೆ 4–00 ಗಂಟೆಗೆ. ಸಾಧ್ಯವಾದಲ್ಲಿ ಸದರಿ ದಿನಾಂಕದಂದೇ ಹಾಜರಿರುವ ಗುತ್ತಿಗೆದಾರರ ಸಮ್ಮುಖದಲ್ಲಿ ಟೆಂಡರ್‌ಗಳನ್ನು ತೆರೆಯಲಾಗುವುದು. ತಪ್ಪಿದಲ್ಲಿ ಟೆಂಡರ್ ತೆರೆಯುವ ಮುಂದಿನ ದಿನಾಂಕವನ್ನು ತಿಳಿಸಲಾಗುವುದು.
4) ಹೆಚ್ಚಿನ ಮಾಹಿತಿಗಳನ್ನು ಕಛೇರಿ ಕೆಲಸದ ವೇಳೆಯಲ್ಲಿ ಮತ್ತು ನಗರಸಭೆ ವೆಬ್‌ಸೈಟ್ www.mandyacity.gov.inರಲ್ಲಿ ಪಡೆಯಬಹುದು.

| ಪ್ಯಾಕೇಜ್ ಸಂಖ್ಯೆ | ಕಾಮಗಾರಿಗಳ ವಿವರ | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಪ್ಯಾಕೇಜ್ ಮೊತ್ತ (ರೂ.ಲಕ್ಷಗಳಲ್ಲಿ) | ಇ.ಎಂ.ಡಿ. ರೂ.ಗಳಲ್ಲಿ | ಟೆಂಡರ್ ಫಾರಂ ಬೆಲೆ | ಗುತ್ತಿಗೆದಾರರ ದರ್ಜೆ | ಅವಧಿ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| 1 | ಮಂಡ್ಯ ನಗರದ ಷುಗರ್ ಫ್ಯಾಕ್ಟರ್ ಸರ್ಕಲ್‌ನಲ್ಲಿ ಹೈಮಾಸ್ಟ್ ದೀಪ ಸರಬರಾಜು ಮಾಡಿ ಅಳವಡಿಸುವುದು. | 6.00 | 12.00 | 24000–00 | 2000–00 + ತೆರಿಗೆ | 1ನೇ ದರ್ಜೆ | 3 ತಿಂಗಳು |
| | –" ನಂದಾ ಸರ್ಕಲ್ –"– | 6.00 | | | | | |
| 2 | –"– ಮಹಾವೀರ ಸರ್ಕಲ್ –"– | 6.00 | 12.00 | 24000–00 | 2000–00 + ತೆರಿಗೆ | 1ನೇ ದರ್ಜೆ | 3 ತಿಂಗಳು |
| | –"– ಸಂಜಯ ಸರ್ಕಲ್ –"– | 6.00 | | | | | |

| 1 | 2 | 3 | 4 | 5 | 6 | 7 | 8 |
|---|---|---|---|---|---|---|---|
| 3 | –"– ಕಲ್ಲಹಳ್ಳಿ ಸರ್ಕಲ್ –"– | 6.00 | 12.00 | 24000–00 | 2000–00 | 1ನೇ ದರ್ಜೆ | 3 ತಿಂಗಳು |
| | –"– ಹೊಳಲು ಸರ್ಕಲ್ –"– | 6.00 | | | + ತೆರಿಗೆ | | |
| | –"– ಅಂಬೇಡ್ಕರ್ ಸರ್ಕಲ್ –"– | 6.00 | 12.00 | 24000–00 | 2000–00 | 1ನೇ ದರ್ಜೆ | 3 ತಿಂಗಳು |
| 4 | –"– ಕರ್ನಾಟಕ ಬಾರ್ ಸರ್ಕಲ್ –"– | 6.00 | | | + ತೆರಿಗೆ | | |
| | –"– ಹೊಸಹಳ್ಳಿ ಸರ್ಕಲ್ –"– | 6.00 | 12.00 | 24000–00 | 2000–00 | 1ನೇ ದರ್ಜೆ | 3 ತಿಂಗಳು |
| 5 | –"– ಸುಧೀರ್ ಸರ್ಕಲ್ –"– | 6.00 | | | + ತೆರಿಗೆ | | |
| 6 | –"– ಸರ್.ಎಂ.ವಿ. ಕ್ರೀಡಾಂಗಣದ ಆವರಣದಲ್ಲಿ –"– | 6.00 | 6.00 | 12000–00 | 1000–00 + ತೆರಿಗೆ | 1ನೇ ದರ್ಜೆ | 3 ತಿಂಗಳು |

**ಷರತ್ತುಗಳು:**

1) ಗುತ್ತಿಗೆದಾರರು ಟೆಂಡರ್ ಫಾರಂ ಪಡೆಯುವಾಗ ತಮ್ಮ ರಿಜಿಸ್ಟ್ರೇಷನ್ ಪಾಸ್‌ಬುಕ್ ಅನ್ನು ಹಾಜರುಪಡಿಸಿ ಕೆಲಸದ ವಿವರವನ್ನು ದಾಖಲಿಸಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ಟೆಂಡರ್ ಫಾರಂ ನೀಡಲಾಗುವುದಿಲ್ಲ.
2) ಈ ಹಿಂದಿನ (2006–07 ರಿಂದ 2008–09ರವರೆಗೆ) 3 ವರ್ಷಗಳಲ್ಲಿ 07) ಯಾವುದಾದರು ಒಂದು ವರ್ಷದಲ್ಲಿ ಇದೇ ಮಾದರಿಯ ಕೆಲಸವನ್ನು ಸರ್ಕಾರಿ ಹಾಗೂ ಸರ್ಕಾರಿ ಅಂಗ ಸಂಸ್ಥೆಗಳಲ್ಲಿ ಅಳವಡಿಸಿರುವ ಬಗ್ಗೆ ದೃಢೀಕರಣ ಪತ್ರವನ್ನು ಸಂಬಂಧಿಸಿದ ಸಕ್ಷಮ ಪ್ರಾಧಿಕಾರದಿಂದ ಪಡೆದು ಹಾಜರುಪಡಿಸತಕ್ಕದ್ದು.
3) ಟೆಂಡರ್ ಸಲ್ಲಿಸುವವರು ಇ.ಎಂ.ಡಿ.ಯನ್ನು ಕ್ರಾಸ್ ಮಾಡಿದ ಡಿಮ್ಯಾಂಡ್ ಡ್ರಾಫ್ಟ್‌ನ್ನು ಯಾವುದೇ ಷೆಡ್ಯೂಲ್ಡ್ ಬ್ಯಾಂಕ್‌ನಿಂದ ಪೌರಾಯುಕ್ತರು, ನಗರಸಭೆ, ಮಂಡ್ಯರವರ ಹೆಸರಿನಲ್ಲಿ ಪಡೆದು ಮಂಡ್ಯದಲ್ಲಿ ಪಾವತಿಯಾಗುವಂತೆ ಟೆಂಡರ್ ಅರ್ಜಿ ಕೋರಿ ಮನವಿ ಸಲ್ಲಿಸುವಾಗಲೇ ಜೊತೆಯಲ್ಲಿ ಸಲ್ಲಿಸತಕ್ಕದ್ದು. ಮನವಿಯೊಂದಿಗೆ ಇ.ಎಂ.ಡಿ.ಸಲ್ಲಿಸದಿದ್ದರೆ ಮತ್ತು ಪೌರಾಯುಕ್ತರವರ ಹೆಸರಿನಲ್ಲಿ ಒತ್ತೆ ಮಾಡದಿದ್ದಲ್ಲಿ ಮನವಿಯನ್ನು ತಿರಸ್ಕರಿಸಲಾಗುವುದು.
4) ಟೆಂಡರ್‌ನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆಳ ಸಹಿದಾರರು ಕಾಯ್ದಿರಿಸಿರುತ್ತಾರೆ.
5) ಕಾಮಗಾರಿಗಳ ಗುಣಮಟ್ಟವನ್ನು ಕಾಪಾಡುವ ಹಿತದೃಷ್ಟಿಯಿಂದ ಅಂದಾಜು ಮೊತ್ತಕ್ಕಿಂತ ಕಡಿಮೆ ದರ ನಮೂದಿಸಿದಲ್ಲಿ ಅಷ್ಟೆ ಮೊತ್ತದ ಹಣವನ್ನು ಡಿ.ಡಿ.ರೂಪದಲ್ಲಿ ಟೆಂಡರ್ ಜೊತೆ ಲಗತ್ತಿಸಬೇಕು. ತಪ್ಪಿದಲ್ಲಿ ಟೆಂಡರ್ ತಿರಸ್ಕರಿಸಲಾಗುವುದು.
6) ಆರ್ಥಿಕ ಸಾಮರ್ಥ್ಯವನ್ನು ಸಾಬೀತುಪಡಿಸಿ ಪುಷ್ಟೀಕರಿಸುವ ದಾಖಲೆಗಳನ್ನು ಅರ್ಹತಾ ಮಾನದಂಡಗಳೊಡನೆ ಲಗತ್ತಿಸತಕ್ಕದ್ದು. ಹೆಚ್ಚಿನ ನಿಬಂಧನೆಗಳನ್ನು ವೆಬ್ ಸೈಟ್ ಹಾಗೂ ಟೆಂಡರ್ ಡಾಕ್ಯುಮೆಂಟ್‌ನಲ್ಲಿ ತಿಳಿಸಿರುವಂತೆ ಟೆಂಡರ್ ಸಲ್ಲಿಸುವಾಗ ಟೆಂಡರ್‌ನ ಜೊತೆ ಪ್ರಸ್ತುತಪಡಿಸತಕ್ಕದ್ದು.
7) ಸರ್ಕಾರದಿಂದ ಮುಂದೆ ಬಿಡುಗಡೆಯಾಗಲಿರುವ ಎಸ್.ಎಫ್.ಸಿ. ಮುಕ್ತ ನಿಧಿ ಅನುದಾನಕ್ಕನುಗುಣವಾಗಿ ಹಂತ ಹಂತವಾಗಿ ಕಾರ್ಯಾದೇಶ ನೀಡಿ ಕಾಮಗಳು ಪೂರ್ಣಗೊಂಡ ನಂತರ 3ನೇ ಪಾರ್ಟಿ ವರದಿ ನಂತರ ಬಿಲ್ಲು ಪಾವತಿಸಲು ಕ್ರಮ ವಹಿಸಲಾಗುವುದು.

8) KW-I ನಿಯಮಕ್ಕೆ ಬದ್ಧರಾಗಿರತಕ್ಕದ್ದು ಹಾಗೂ ಆಗಿಂದಾಗ್ಗೆ ಸರ್ಕಾರದಿಂದ ಜಾರಿಯಾಗುವ ಆದೇಶಗಳು ಮತ್ತು ನೀತಿ ನಿಯಮಗಳಿಗೆ ಬದ್ಧರಾಗಿರತಕ್ಕದ್ದು.

9) ಹೈಮಾಸ್ಟ್ ದೀಪಕ್ಕೆ ಸಂಬಂಧಿಸಿದ ಸಾಮಗ್ರಿಗಳನ್ನು ಅಧಿಕೃತ ತಯಾರಕಾ ಕಂಪೆನಿಯಿಂದ ಖರೀದಿಸಿರುವ ಬಗ್ಗೆ ದೃಢೀಕರಣ ಪತ್ರ ಸಲ್ಲಿಸಿದ ನಂತರ ಬಿಲ್ ಪಾವತಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

| | | |
|---|---|---|
| ಸಹಿ: | ಸಹಿ: | ಸಹಿ: |
| (ರಾಮಸ್ವಾಮಿ) | (ಎಸ್.ರಮೇಶ್) | (ಜಿ.ಎಸ್.ನಾಗಮಣಿ) |
| ಪೌರಾಯುಕ್ತರು, | ಉಪಾಧ್ಯಕ್ಷರು, | ಅಧ್ಯಕ್ಷರು , |
| ನಗರಸಭೆ, ಮಂಡ್ಯ. | ನಗರಸಭೆ, ಮಂಡ್ಯ. | ನಗರಸಭೆ, ಮಂಡ್ಯ. |